# Nearly two lakh students to appear for CET 2018


## Number of aspirants up by 10% from last year

STAFF REPORTER
BENGALURU

There has been a 10% increase in the number of applications for the Common Entrance Test (CET) to be held on Wednesday and Thursday. According to the Karnataka Examinations Authority (KEA), this year, there are 1.98 lakh applications compared to last year's 1.79 lakh.

The exam is the gateway for government and government-quota seats in engineering, farm sciences, B. Pharma and D. Pharma courses, among others, in colleges in the State.

On Wednesday, candidates will have to write the biology and mathematics papers and they will have to appear for the physics and chemistry papers on Thursday.




The Kannada language test will be conducted on Friday for Horanadu and Gadinadu Kannadiga candidates.

### Pre-printed booklet

Candidates will get OMR answer sheets that will have the name, admission ticket number, and the version code of the question booklet that is pre-printed.

A KEA release said candidates will have to confirm if the CET number, name printed in the OMR answer sheet, and the admission ticket is the same.

Candidates are not allowed to wear watches or carry any electronic gadgets.

THE NEW INDIAN EXPRESS

# 10 per cent rise in CET applicants this year

ENS @ Bengaluru

THERE has been a 10.60% increase in number of aspirants for under-graduate engineering seat under Common Entrance Test (CET) 2018, scheduled to be held on April 18, 19 and 20, according to the Karnataka Examinations Authority (KEA). During CET 2017, the total number of applications received were 1.79 lakh and this time, it has increased to 1.98 lakh.

However, during 2017, the applications included even for AYUSH courses, but this year, the applications are only for engineering, agriculture and pharma courses.

"For medical and dental courses, the state has agreed to go with the National Eligibility cum Entrance Test (NEET). From this year, even AYUSH courses will be under NEET. The CET will be only for engineering, agriculture and pharmacy courses," said a KEA official. Many candidates have applied for CET 2018 as they are not sure of getting medical seats through NEET. "Earlier, it used to be a single application for all the courses. Now, we have applied for both NEET and CET. As NEET is an all-India test, I am not sure of getting a medical seat, so I applied for CET also," said a candidate.

SDUAHER

ವಿಜಯವಾಣಿ

# ಸಿಇಟಿ ಪರೀಕ್ಷೆ ನಾಳೆ ಆರಂಭ

## 1.98 ಲಕ್ಷ ಪರೀಕ್ಷಾರ್ಥಿಗಳು | ಏ. 20ಕ್ಕೆ ಮುಕ್ತಾಯ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ನಡೆಸುವ 2018ನೇ ಸಾಲಿನ ಸಿಇಟಿ ಏ.18ರಿಂದ 20ರವರೆಗೆ ನಡೆಯಲಿದ್ದು, ಈ ವರ್ಷ 1.98 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ. ರಾಜ್ಯದ 430 ಪರೀಕ್ಷಾ ಕೇಂದ್ರಗಳಲ್ಲಿ 1,98,639 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಇವರಲ್ಲಿ 1,00,071 ಬಾಲಕರು, 98,568 ಬಾಲಕಿಯರು. ಕಳೆದ 2 ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚಿನ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. 2017ರಲ್ಲಿ 1.79, 2016ರಲ್ಲಿ 1.78 ಲಕ್ಷ ವಿದ್ಯಾರ್ಥಿಗಳು ಸಿಇಟಿಗೆ ನೋಂದಾಯಿಸಿಕೊಂಡಿದ್ದರು. ಭದ್ರತಾ ದೃಷ್ಟಿಯಿಂದ 860 ವಿಶೇಷ ಜಾಗೃತ ದಳ, 430 ಪ್ರಶ್ನೆಪತ್ರಿಕೆ ಪಾಲಕರು, 12,440 ಕೊಠಡಿ ಮೇಲ್ವಿಚಾರಕರು ಸೇರಿ ಒಟ್ಟಾರೆ 31,360 ಅಧಿಕಾರಿಗಳನ್ನು ನೇಮಿಸಲಾಗಿದೆ. ಪ್ರಶ್ನೆಪತ್ರಿಕೆ ಕನ್ನಡ ಮತ್ತು ಆಂಗ್ಲಭಾಷೆಯಲ್ಲಿರಲಿದ್ದು, ಕನ್ನಡದಲ್ಲಿ ಅನುಮಾನ ಇದ್ದಲ್ಲಿ ಆಂಗ್ಲ ಪ್ರಶ್ನೆಪತ್ರಿಕೆ ನೋಡಬಹುದು. ಏ.18 ಮತ್ತು 19ರಂದು ಜೀವಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಏ.20ರಂದು ಗಡಿನಾಡು ಕನ್ನಡಿಗರಿಗೆ ಕನ್ನಡ ಪರೀಕ್ಷೆ ನಡೆಯಲಿದೆ. ಇದಕ್ಕೆ 2,240 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

# ನಾಳೆಯಿಂದ ಸಿಇಟಿ: ಹೀಗಿರಲಿ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವೃತ್ತಿ ಶಿಕ್ಷಣ ಕೋರ್ಸ್‌ಗಳಿಗಾಗಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಇದೇ 18ರಿಂದ ಪ್ರಾರಂಭವಾಗಲಿದೆ.

18ರಂದು ಜೀವವಿಜ್ಞಾನ, ಗಣಿತ, 19ಕ್ಕೆ ಭೌತವಿಜ್ಞಾನ ಮತ್ತು ರಸಾಯನವಿಜ್ಞಾನ ಪರೀಕ್ಷೆ ನಡೆಯಲಿದೆ. 20ಕ್ಕೆ ಹೊರರಾಜ್ಯದ ಅಭ್ಯರ್ಥಿಗಳಿಗೆ ಕನ್ನಡ ಭಾಷೆ ಪರೀಕ್ಷೆ ಇರಲಿದೆ. ಇದೇ ಮೊದಲ ಬಾರಿಗೆ ಪ್ರಶ್ನೆಪತ್ರಿಕೆಗಳನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮುದ್ರಿಸಲಾಗಿದೆ.

ಆಯುಷ್, ನ್ಯಾಚುರೋಪತಿ, ಯೋಗ, ಯುನಾನಿ ಕೋರ್ಸ್‌ಗಳು ನೀಟ್ ಅಡಿಯಲ್ಲಿ ಬರಲಿವೆ. ಹಾಗಾಗಿ ಸಿಇಟಿ, ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

ರಾಜ್ಯದಲ್ಲಿ ಒಟ್ಟು 430 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬೆಂಗಳೂರಿನಲ್ಲಿ 86 ಕೇಂದ್ರಗಳನ್ನು ತೆರೆಯಲಾಗಿದೆ. 1,00,071 ವಿದ್ಯಾರ್ಥಿಗಳು ಮತ್ತು 98,568 ವಿದ್ಯಾರ್ಥಿನಿಯರು ಈ ಬಾರಿ ಪರೀಕ್ಷೆ ಬರೆಯಲಿದ್ದಾರೆ.

**ಏನೆಲ್ಲ ಕೊಂಡೊಯ್ಯಬೇಕು?:** ವಿದ್ಯಾರ್ಥಿಗಳು ಸಿಇಟಿ ಪ್ರವೇಶಪತ್ರದ ಜೊತೆ ಮಾನ್ಯತೆ ಇರುವ ಯಾವುದಾದರೂ ಗುರುತಿನ ಚೀಟಿಯನ್ನು (ಕಾಲೇಜಿನ ಗುರುತಿನ ಚೀಟಿ/ ದ್ವಿತೀಯ ಪಿಯು ಪ್ರವೇಶ ಪತ್ರ/ ಬಸ್ ಪಾಸ್/ ಚಾಲನ ಪರವಾನಗಿ/ ಪಾಸ್‌ಪೋರ್ಟ್/ ಆಧಾರ್ ಕಾರ್ಡ್/ ಪ್ಯಾನ್‌ಕಾರ್ಡ್) ಕಡ್ಡಾಯವಾಗಿ ನೀಡಲಾಗುತ್ತದೆ.

**ಸಿಇಟಿ ಪರೀಕ್ಷಾ ವೇಳಾಪಟ್ಟಿ**

| ದಿನಾಂಕ | ಸಮಯ | ವಿಷಯ | ಅಂಕ |
|---|---|---|---|
| 18.04.2018 ಬುಧವಾರ | ಬೆಳಿಗ್ಗೆ 10.30 ರಿಂದ 11.50 | ಜೀವವಿಜ್ಞಾನ | 60 |
| | ಮಧ್ಯಾಹ್ನ 2.30ರಿಂದ 3.50 | ಗಣಿತ | 60 |
| 19.04.2018 ಗುರುವಾರ | ಬೆಳಿಗ್ಗೆ 10.30 ರಿಂದ 11.50 | ಭೌತವಿಜ್ಞಾನ | 60 |
| | ಮಧ್ಯಾಹ್ನ 2.30ರಿಂದ 3.50 | ರಸಾಯನ ವಿಜ್ಞಾನ | 60 |

## ‘ನಿರ್ಲಿಪ್ತ ಮನಸ್ಸು ಪರೀಕ್ಷೆಗೆ ಪೂರಕ’

‘ಯಾವುದೇ ಗೊಂದಲ, ಆಕಾಂಕ್ಷೆಗಳನ್ನು ಇಟ್ಟುಕೊಳ್ಳದೆ ನಿರ್ಲಿಪ್ತ ಮನಸ್ಸಿನಿಂದ ಪರೀಕ್ಷೆ ಬರೆಯಿರಿ’ ಎನ್ನುತ್ತಾರೆ ಆಪ್ತ ಸಮಾಲೋಚಕಿ ಅನ್ನಪೂರ್ಣ ಮೂರ್ತಿ.

‘ಪರೀಕ್ಷೆಯ ಹಿಂದಿನ ದಿನ 6 ರಿಂದ 7 ತಾಸು ನಿದ್ದೆ ಮಾಡುವುದು ಆರೋಗ್ಯಕರ. ಪೌಷ್ಟಿಕಾಂಶಯುಕ್ತ ಆಹಾರ ಸೇವಿಸಿ. ಪೋಷಕರು ಮಕ್ಕಳಿಗೆ ಯಾವುದೇ ರೀತಿಯ ಒತ್ತಡ ಹೇರುವ ಮಾತುಗಳನ್ನಾಡದೆ, ಶುಭ ಹಾರೈಸಿ ಕಳುಹಿಸಿ’ ಎಂದು ಸಲಹೆ ನೀಡಿದರು.

ತೆಗೆದುಕೊಂಡು ಹೋಗಬೇಕು. ನೀಲಿ ಅಥವಾ ಕಪ್ಪು ಮಸಿಯ ಎರಡು ಪೆನ್‌ಗಳನ್ನು ಇಟ್ಟುಕೊಂಡಿರುವುದು ಸೂಕ್ತ.

**ಉತ್ತರಿಸುವ ಮುನ್ನ ಇದನ್ನು ತಿಳಿದಿರಿ:** ಪರೀಕ್ಷೆ ಬರೆಯುವ ಆತಂಕದಲ್ಲಿರುವ ವಿದ್ಯಾರ್ಥಿಗಳು ಉತ್ತರ ಪತ್ರಿಕೆಯಲ್ಲಿ ನಮೂದಿಸಬೇಕಾದ ಕೆಲ ಮಾಹಿತಿಗಳನ್ನು ತಪ್ಪಾಗಿ ಬರೆಯುವುದನ್ನು ತಪ್ಪಿಸಲು ಈ ಬಾರಿ ವಿದ್ಯಾರ್ಥಿಗಳ ಹೆಸರು, ಕ್ರಮಸಂಖ್ಯೆ, ಪ್ರಶ್ನೆ ಪತ್ರಿಕೆ ಸಂಖ್ಯೆ ಎಲ್ಲವೂ ನಮೂದಾಗಿರುವ (ಪ್ರಿ-ಪ್ರಿಂಟೆಡ್) ಒಎಂಆರ್ ಪತ್ರಿಕೆಯನ್ನು

ವಿದ್ಯಾರ್ಥಿಗಳು ತಮಗೆ ನೀಡಿರುವ ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಮಾಹಿತಿ ಹಾಗೂ ಪ್ರವೇಶ ಪತ್ರದ ಮಾಹಿತಿ ಒಂದೇ ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಅದೇ ರೀತಿ ಪ್ರಶ್ನೆಪತ್ರಿಕೆ ಮತ್ತು ಒಎಂಆರ್ ಉತ್ತರ ಪತ್ರಿಕೆಯ ಕೋಡ್ ಒಂದೇ ಇದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು.

ಒಎಂಆರ್ ಉತ್ತರ ಪತ್ರಿಕೆಗಳಲ್ಲಿ ಶೇಡ್ ಮಾಡುವುದರ ಮೂಲಕ ಉತ್ತರಿಸಬೇಕು. ಸರಿ ಉತ್ತರಗಳನ್ನು ನೀಲಿ ಅಥವಾ ಕಪ್ಪು ಮಸಿಯ ಪೆನ್‌ಗಳಿಂದ ಗುರುತಿಸಬೇಕು.

**ಹೆಚ್ಚಿನ ಭದ್ರತೆ:** ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪರೀಕ್ಷೆ ನಡೆಯಲಿದ್ದು, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಸಹಾಯಕ ಆಯುಕ್ತರ ಮಟ್ಟದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಜಿಲ್ಲಾಧಿಕಾರಿಗಳಿಗೆ ಖಜಾನೆಗಳ ಹೆಚ್ಚಿನ ಭದ್ರತೆ ಜವಾಬ್ದಾರಿ ವಹಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಒಟ್ಟು 430 ಪರೀಕ್ಷಾ ವೀಕ್ಷಕರು, 860 ವಿಶೇಷ ಜಾಗೃತಿ ದಳದ ಸದಸ್ಯರು, 430 ಪ್ರಶ್ನೆ ಪತ್ರಿಕೆ ಪಾಲಕರು, 12440 ಕೊಠಡಿ ಮೇಲ್ವಿಚಾರಕರ ಕಣ್ಗಾವಲಿನಲ್ಲಿ ಸಿಇಟಿ ನಡೆಯಲಿದೆ ಎಂದು ತಿಳಿಸಿದ್ದಾರೆ.

## ಪ್ರಮುಖ ಅಂಶ

- ಪರೀಕ್ಷೆಯ ಮೊದಲ ಕರೆಗಂಟೆ (ಬೆಲ್) ಬಾರಿಸುವ 30 ನಿಮಿಷಗಳ ಮುಂಚಿತವಾಗಿ ಕೇಂದ್ರಗಳಲ್ಲಿ ಹಾಜರಿರಬೇಕು.
- ಅಭ್ಯರ್ಥಿಗಳು ಪರೀಕ್ಷೆ ಸಮಯದಲ್ಲಿ ಕೈಗಡಿಯಾರ ಕಟ್ಟುವಂತಿಲ್ಲ. ಟ್ಯಾಬ್ಲೆಟ್, ಮೊಬೈಲ್, ಕ್ಯಾಲ್ಕುಲೇಟರ್ ಒಯ್ಯುವಂತಿಲ್ಲ.
- ಪರೀಕ್ಷೆಯ ಎರಡನೇ ದಿನದ ಕೊನೆಯಲ್ಲಿ ಆಯಾ ಕೇಂದ್ರಗಳಿಂದ ಮಾಹಿತಿ ಪುಸ್ತಕ (ಬ್ರೋಷರ್) ಸಂಗ್ರಹಿಸಿಕೊಳ್ಳಬೇಕು.